ಪರ್ಸೆಂಟ್ ಚಾರ್ಜ್ ಇರುವಾಗಲೇ ಎಚ್ಚೆತ್ತುಕೊಂಡು ಮುಂದಿನ ಕ್ರಮ ಕೈಗೊಳ್ಳುವವರು, ಸುಖಾ ಸುಮ್ಮನೆ ಹಣವನ್ನು ಪೋಲು ಮಾಡದೆ ಖರ್ಚು ಮಾಡಿದಂತೆಯೇ, ತಮ್ಮ ಮೊಬೈಲ್ ಚಾರ್ಜ್ ಸಹ ಉಳಿತಾಯ ಮಾಡುವವರ ಮೊಬೈಲ್‌ಗಳು ನಿಜಕ್ಕೂ ಪುಣ್ಯ ಮಾಡಿರಬೇಕೆನೋ ಎನಿಸುತ್ತದೆ. ನಾನು ಮಾತ್ರ ಆ ಕೆಟಗರಿಯಲ್ಲಿ ಬರದೆ, ಕೊನೆಯ ಉಸಿರು ನಿಲ್ಲುವವರೆಗೂ ಅದನ್ನು ದುಡಿಸಿಕೊಳ್ಳುವಾಕೆ! ಅದಕ್ಕೇನಾದರೂ ಜೀವ ಇದ್ದಿದ್ದರೆ ನನ್ನ ಬಳಿ ಇರದೆ ಓಡಿಹೋಗುತ್ತಿತ್ತು ಎಂಬ ಸಂದೇಹ ನನಗಿದೆ.

ದಿನದ ಬಹುಪಾಲು ಸಮಯವನ್ನು ಮೊಬೈಲ್‌ನ ಪುಟ್ಟ ಪರದೆಯನ್ನು ನೋಡತ್ತ ಜಗತ್ತನ್ನು

